
# ಅಖಿಲ ಭಾರತ ಪ್ರಬಂಧ ಬರವಣಿಗೆ ಸ್ಪರ್ಧೆಯ ಪ್ರಶಸ್ತಿ ವಿತರಣೆ ಸಮಾರಂಭ

KP



ಎಂಪಿಎಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಅಖಿಲ ಭಾರತ ಪ್ರಬಂಧ ಬರವಣಿಗೆ ಸ್ಪರ್ಧೆಯ ಪ್ರಶಸ್ತಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಕಾರ್ಕಳ

ಶ್ರೀ ರಾಮ್‌ಚಂದ್ರ ಚಂದ್ರ ಮಿಶನ್ ಸಂಘಟನೆ ವತಿಯಿಂದ ಭಾರತ, ಭೂತಾನ್ ಮತ್ತು ಹಾರ್ಟ್‌ಫುಲ್‌ನೆಸ್ ಎಜುಕೇಶನ್ ಟ್ರಸ್ಟ್‌ನ ಯುನೈಟೆಡ್ ನೇಷನ್ಸ್ ಇನ್ಫರ್ಮೇಶನ್ ಸೆಂಟರ್ ಆಶ್ರಯದಲ್ಲಿ ನಡೆದ ಅಖಿಲ ಭಾರತ ಪ್ರಬಂಧ ಬರವಣಿಗೆ ಸ್ಪರ್ಧೆಯ ಪ್ರಶಸ್ತಿ ವಿತರಣೆ ಸಮಾರಂಭವು ಎಂಪಿಎಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿತು.

ಶ್ರೀಮದ್ ಭುವನೇಂದ್ರ ಕಾಲೇಜಿನ ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ಕೆ. ಸುಶ್ಮಾ ರಾಜ್ಯಮಟ್ಟದಲ್ಲಿ ಫಿಲಿಸ್ ಪ್ರಬಂಧ ಸಮಾರಂಭದಲ್ಲಿ ಪ್ರಥಮ ಪ್ರಶಸ್ತಿ ಪಡೆದರು.

ಎಂಪಿಎಂ ಕಾಲೇಜಿನ ಶಹನಾ ಭಟ್ ಕೆ.ವಿ. ಹಾಗೂ ನಿಟ್ಟೆ ಎನ್‌ಎಸ್‌ಎಂ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಅಂವಿತಾ ಸಾರಾ ಮಬೆನ್ ನಾಲ್ಕನೇ ಸ್ಥಾನ ಗಳಿಸಿದರು. ಆದಿತಿ ಮುದ್ರಾಡಿ ಐದನೇ ಸ್ಥಾನ, ಆಕಾಂಕ್ಷಾ ದೇವದಾಗಿ ಎಂಟನೇ ಸ್ಥಾನ ಗಳಿಸಿದರು. ಎಂಪಿಎಂ ಕಾಲೇಜಿನ ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಎಂ. ಬಹುಮಾನ ವಿತರಿಸಿದರು. ಹಾರ್ಟ್‌ಫುಲ್‌ನೆಸ್ ಎಜುಕೇಶನ್‌ನ ವಲಯ ಸಂಯೋಜಕ ಸಿಕರ್ನ ಹಾಗೂ ಸಂಯೋಜಕ ಶಿವ ಇ ಶಂಕರ್, ಪ್ರಬಂಧ ಸಮಲೋಚಕರಾದ ಮಂಜುನಾಥ ನಾಯಕ್ ಹಾಗೂ ಕೆ. ಎಂ.ಅಡಿಗ ಉಪಸ್ಥಿತರಿದ್ದರು. ಸಮೀಕ್ಷಾ ಸ್ವಾಗತಿಸಿದರು.